
## ಪದಬಂಧ



### ಎಡದಿಂದ ಬಲಕ್ಕೆ

1. ಹನುಮಂತನ ಪೂಜೆಗೆ ಸಕಲ ಜನರ ಒಪ್ಪಿಗೆ ಇದೆ 4
3. ವಿಹಾರಕ್ಕೆಂದು ಹೊರಟವರಿಗೆ ಮಣ್ಣಿನ ಮಡಿಕೆ ಏಕೆ? 3
4. ಆ ಋಷಿಯ ಆಶ್ರಮದ ಬಳಿ ಎಂಥ ಭಾರೀ ಗೂಳಿ! 3
6. ತಪ್ಪಿಸಲು ಸಾಧ್ಯವೇ ಇಲ್ಲ; ಸುಮ್ಮನೆ ಹೋಗಿ ಅವರ ಕೈಗೆ ಕೊಡು 4
7. ಅಂತರವನ್ನು ಅರಿಯಲು ಇಂಥ ಗಡಿಬಿಡಿ ಏಕೆ? 3
9. ಉಸುಕು ಹರಡಿರುವುದನ್ನು ಮರೆ ಮಾಡಲು ಒಂದು ಪರದೆ 3
11. ಶಂಕರಾಭರಣ ರಾಗವನ್ನು ಹಾಡಿದ್ದು ಒಳ್ಳೆಯ ಉತ್ಪಾತ ಹೌದೇ? 3
13. ಸಂಕಲಿಸುವುದನ್ನು ಹಿಂದುಮುಂದಾಗಿಯಾದರೂ ಹೇಳಿ ಕೊಡು 3
15. ವಿಮಾನ ಹಾರಲು ಸೂಕ್ತವಾಗಿದೆಯೇ ಗಾಳಿ ಪರಿಸ್ಥಿತಿ? 4
17. ಆಕೆ ಇಂಥ ಲಾವಣ್ಯವತಿ ಆಗಲು ಕಾರಣ ಉಪ್ಪು ಹೌದೇ? 3
18. ಸರಳನ್ನು ಸುತ್ತಿ ಸುತ್ತಿ ತಯಾರಿಸಿದ್ದು ಹಿಂದುಮುಂದು 3
19. ತೆಳ್ಳಗಾಗುವುದಕ್ಕೆಂದು ಏನೇನೋ ಮಾಡಿ ಪಡೆದದ್ದು ಬರೀ ನಿಂದನೆ 4

### ಮೇಲಿನಿಂದ ಕೆಳಕ್ಕೆ

1. ವಿಸ್ತೃತ ವಿವರಣೆಗೆ ಇನ್ನೂ ಸಿಕ್ಕಿಲ್ಲ ನಮ್ಮ ಸೂರ್ಯ 3
2. ಸೂತ್ರ ಹರಿಯಿತೆಂದರೆ ಬೇರೊಂದನ್ನು ಇಲ್ಲಿಗೇ ಒದಗುವಂತೆ ಮಾಡು 3
3. ಹಳ್ಳಕ್ಕೆ ಬಿದ್ದುಹೋಯಿತು. ಸದ್ಯ, ಅದು ಕಿಂಚಿತ್ತೂ ಹೊಸತಲ್ಲ 3
5. ತೀವ್ರ ಹೆದರಿಕೆ ಬರುವ ಸನ್ನಿವೇಶವನ್ನು ಹೇಗಾದರೂ ಸಹಿಸು 3
7. ಆ ಅಶ್ವಾರೋಹಿಯ ಭಾವಗಳೆಲ್ಲ ಕೆರಳಿ ಬಂದಂತಿವೆ 3
8. ಚರಚರನೆ ಕತ್ತರಿಸಿ ರೂಪಿಸಿದ್ದು ಈ ನಿರ್ಮಿತಿ 3
9. ಸಾಮಾನ್ಯ ವಿಷಯಗಳಿಗೆಲ್ಲ ಏಕಿಂಥ ಕೋಪ? 3
10. ಹಕ್ಕು ಕೇಳಲು ಹೋದವರಿಗೆ ವ್ಯಂಗ್ಯದ ಮಾತಾಡುವುದೇ? 3
12. ಕಟ್ಟಲಿಲ್ಲ, ಕುಟ್ಟಲೂ ಇಲ್ಲ; ಬರೀ ಮೋಸ ತುಂಬಿದ್ದು 3
14. ಖುಲಾಸೆ ಆಗಿದೆ ಎಂಬುದನ್ನು ಈ ಪತ್ರದಲ್ಲಿ ಬರೆ 3
15. ಅಡಗಿಸಿ ಇಟ್ಟಿದ್ದ ಹಣವನ್ನು ಕತ್ತಲಲ್ಲಿ ತೆಗೆಯಲು ತಕ್ಕ ದೀಪ 3
16. ನಾಳಿನ ಕೆಲಸಕ್ಕೆ ಬೇಕೇ ಬೇಕಾದದ್ದು ಈ ತೆಳ್ಳನ್ನ ಕೊಳವೆ 3

### 11–07–2024 ಉತ್ತರಗಳು

**ಎಡದಿಂದ ಬಲಕ್ಕೆ**

1. ಉಪದೇಶ 3. ವಿವಾದ 4. ಕಡಿಮೆ 6. ಆಪದ್ಧನ 8. ಮಾಗುವಿಕೆ 10. ಸುಮಧುರ 12. ಕಲೋದ್ಯಾನ 16. ಣರಕ (=ಕರಣ ಹಿಂದುಮುಂದು) 17. ಮಲಿನ 18. ರಮ್ಯವನ

**ಮೇಲಿನಿಂದ ಕೆಳಕ್ಕೆ**


1. ಉದರ 2. ಶಕಟ 3. ವಿರುದ್ಧ 5. ಮೆರುಗು 6. ಆಸುಪಾಸು 7. ನಷ್ಟಕರ 8. ಮಾನಸಿಕ 9. ಕೆಟ್ಟಜನ 11. ಧುರೀಣ 13. ಲೋಚನ 14. ಆಕರ 15. ಶಮನ

ಪ್ರಶ್ನಾಂಕಣ

## ಬಾಹ್ಯಾಕಾಶದಲ್ಲಿ ವಾಸನೆ: ಏಕೆ? ಹೇಗೆ?

ವಿಶ್ವದಲ್ಲಿ ಸಕಲ ಕಾಯಗಳೂ ಎಂದರೆ, ನಕ್ಷತ್ರಗಳು, ಗ್ರಹಗಳು, ಉಪಗ್ರಹಗಳು (ಚಿತ್ರ 3) ಇತ್ಯಾದಿ ಎಲ್ಲ ಕಾಯಗಳೂ ತೇಲಾಡುತ್ತಿರುವ ಖಾಲಿ ಪ್ರದೇಶವೇ ಬಾಹ್ಯಾಕಾಶ (ಸ್ಪೇಸ್). ಸ್ಪಷ್ಟವಾಗಿಯೇ ಬಾಹ್ಯಾಕಾಶ ಗಾಳಿಯೂ ಇಲ್ಲದ ನಿರ್ವಾತ ಪ್ರದೇಶ. ಅತ್ಯಂತ ಅತ್ಯಂತ ವಿರಳವಾಗಿ ಅಲ್ಲೊಂದು ಇಲ್ಲೊಂದು ಪರಮಾಣುಗಳು ಒಂದೊಂದೇ ತೇಲುತ್ತಿರುವುದನ್ನು ಬಿಟ್ಟರೆ ಬಾಹ್ಯಾಕಾಶ ಸಂಪೂರ್ಣ ದ್ರವ್ಯರಹಿತ ಖಾಲಿ ಪ್ರದೇಶ.

ಆದರೆ, ವಿಸ್ಮಯ ಏನೆಂದರೆ, ಬಾಹ್ಯಾಕಾಶ ವಾಸನಾಯುಕ್ತವಾಗಿದೆ! ವ್ಯೋಮನೌಕೆಗಳಲ್ಲಿ ಅಂತರಿಕ್ಷಕ್ಕೆ ಪಯಣಿಸಿ, ಕೆಲವಾರು ದಿನ ವ್ಯೋಮನಿಲ್ದಾಣಗಳಲ್ಲಿ (ಚಿತ್ರ 2) ಉಳಿದು ಹಿಂದಿರುಗಿರುವ ವ್ಯೋಮ ಯಾತ್ರಿಗಳಿದ್ದಾರೆ. ಅಂತಹರು ಪೂರ್ವ ಯೋಜಿತವಾದಂತೆ ವ್ಯೋಮ ನಿಲ್ದಾಣದಿಂದ ಹೊರಬಂದು ವ್ಯೋಮ ನಡಿಗೆಯನ್ನಾಗಲೀ, ಇತರ ವೈಜ್ಞಾನಿಕ ಚಟುವಟಿಕೆಗಳನ್ನಾಗಲೀ ನಡೆಸಿ ವ್ಯೋಮ ನಿಲ್ದಾಣಕ್ಕೇ ಹಿಂದಿರುಗುತ್ತಾರೆ; ಅಂಥ ಎಲ್ಲ ಗಗನಯಾತ್ರಿಗಳೂ ಬಾಹ್ಯಾಕಾಶ ವಾಸನಯುಕ್ತವಾಗಿರುವುದನ್ನು ಗುರುತಿಸಿದ್ದಾರೆ. ವಾಸ್ತವ ಏನೆಂದರೆ, ಅಂತರಿಕ್ಷದ ವಾಸನೆಗಳನ್ನು ನೇರವಾಗಿ ಅಲ್ಲೇ ಗ್ರಹಿಸುವುದು ಸಾಧ್ಯವಿಲ್ಲ. ಏಕೆಂದರೆ ವ್ಯೋಮನಿಲ್ದಾಣದಿಂದ ಹೊರಬರುವಾಗ ವ್ಯೋಮಯಾತ್ರಿಗಳು ಸಂಪೂರ್ಣ ಸೀಲ್ ಮಾಡಿದ ಹೆಲ್ಮೆಟ್ ಸಹಿತ ಸ್ಪೇಸ್ ಸೂಟ್ ಅನ್ನು ಧರಿಸಿರುತ್ತಾರೆ (ಚಿತ್ರ 1). ವ್ಯೋಮದಲ್ಲಿರುವಾಗ ಸ್ಪೇಸ್ ಸೂಟ್‌ಗೆ ವ್ಯೋಮದ ವಾಸನೆಗಳು ಕಚ್ಚಿಕೊಳ್ಳುತ್ತವೆ. ನಿಲ್ದಾಣಕ್ಕೆ ಹಿಂದಿರುಗಿ ಬಂದಾಗ ಆ ವಾಸನೆಗಳು ಮೂಗಿಗೆ ತಿಳಿಯುತ್ತವೆ.



ಬಾಹ್ಯಾಕಾಶದಲ್ಲಿ ವ್ಯೋಮಯಾತ್ರಿಗಳು ಗ್ರಹಿಸಿರುವ ವಾಸನೆಗಳದು ಹಲವು ವಿಧ: ವೆಲ್ಡಿಂಗ್ ಹೊಗೆಯನ್ನು ಹೋಲುವ ವಾಸನೆ, ಸೀದುಹೋದ ಬಿಸ್ಕಿಟ್‌ಗಳ ವಾಸನೆ, ಸುಟ್ಟ ಪಟಾಕಿಗಳ ವಾಸನೆ, ಉರಿಯುತ್ತಿರುವ ಲೋಹಗಳ ವಾಸನೆ... ಇತ್ಯಾದಿ. ವ್ಯೋಮದ ವಾಸನೆಗಳಿಗೆ ಕಾರಣ ಮೃತವಾಗುವ ನಕ್ಷತ್ರಗಳು. ವಿಶ್ವ ಉದಿಸಿದ ನಂತರದ ಈವರೆಗಿನ ಸಾವಿರಾರು ಕೋಟಿ ವರ್ಷಗಳಲ್ಲಿ ಹೊಸ ನಕ್ಷತ್ರಗಳ ಜನನದ ಜೊತೆ ಜೊತೆಗೇ ನಕ್ಷತ್ರಗಳ ಮರಣವೂ ಸಂಭವಿಸುತ್ತಿದೆ. ಬದುಕಿನ ಅಂತ್ಯದಲ್ಲಿ ವಿಪರೀತ ಉಷ್ಣತೆಯಲ್ಲಿ ಸ್ಫೋಟಗೊಳ್ಳುವ ಪ್ರತಿ ತಾರೆಯೂ ಪಾಲಿಸೈಕ್ಲಿಕ್ ಅರೊಮ್ಯಾಟಿಕ್ ಹೈಡ್ರೋಕಾರ್ಬನ್ಸ್ (PAH) ಎಂಬ ವಾಸನಾಯುಕ್ತ ರಾಸಾಯನಿಕ ಸಂಯುಕ್ತಗಳನ್ನು ಹೊಮ್ಮಿಸುತ್ತದೆ. ಅಂತರಿಕ್ಷದ ವಾಸನೆಗಳಿಗೆ ಈ ವಿದ್ಯಮಾನವೇ ಕಾರಣ.

■ ಎನ್. ವಾಸುದೇವ್